**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಕಡತ ಸಂಖ್ಯೆ: ಸಿ7(8)/ಆರ್.ಟಿ.ಇ/ಶು.ಮ/ತಂತ್ರಾಂಶ/2019-20 ದಿನಾಂಕ: 23-09-2019

## ::ಸುತ್ತೋಲೆ::

ವಿಷಯ : 2018-19ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಅಪೀಲ್ ತಂತ್ರಾಂಶದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ.

ಉಲ್ಲೇಖ : 1. ಮಾನ್ಯ ಆಯುಕ್ತರ ಆದೇಶ ದಿನಾಂಕ : 20-09-2019

2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ : 20-09-2019

&&&&&&

2018-19ರ ಶುಲ್ಕ ಮರುಪಾವತಿಯ ಅಪೀಲ್ ತಂತ್ರಾಂಶವನ್ನು ದಿನಾಂಕ : 20-09-2019 ರಿಂದ 31-10-2019ರ ವರೆಗೆ ಬಿಡುಗಡೆ ಮಾಡಲಾಗಿದೆ. ಅಪೀಲ್ ಪ್ರಸ್ತಾವನೆ ಸಲ್ಲಿಸುವ ಶಾಲೆಗಳು ಅನುಸರಿಸಬೇಕಾದ ಮಾನದಂಡಗಳು ಕೆಳಕಂಡಂತಿರುತ್ತದೆ.

1. ಅಪೀಲ್‌ಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸುವ ಶಾಲೆಗಳು ಎರಡೂ ಕಂತುಗಳ ಶುಲ್ಕ ಮರುಪಾವತಿ ಮೊತ್ತವನ್ನು ಪಡೆದಿರುಬೇಕು.
2. 2018-19ರ ಶುಲ್ಕ ಮರುಪಾವತಿಯ ಅಪೀಲ್ ತಂತ್ರಾಂಶದಲ್ಲಿ ಬಿಟ್ಟುಹೋಗಿರುವ ಮಕ್ಕಳ ಪಟ್ಟಿಯನ್ನು ಶಾಲಾ ಲಾಗಿನ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಸದರಿ ಪಟ್ಟಿಯಲ್ಲಿನ ಅರ್ಹ ಮಕ್ಕಳನ್ನು SATS ತಂತ್ರಾಂಶದಿಂದ ಸೆಳೆಯಲಾಗಿರುತ್ತದೆ. ಯಾವುದೇ ಒಬ್ಬ ವಿದ್ಯಾರ್ಥಿಯನ್ನು ಅಪೀಲ್ ತಂತ್ರಾಂಶದಲ್ಲಿ ಸೇರಿಸಬೇಕಾದಲ್ಲಿ ಆ ವಿದ್ಯಾರ್ಥಿಯ ಹಾಜರಾತಿ ಕಡ್ಡಾಯವಾಗಿ ಇರತಕ್ಕದ್ದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.
3. ಅಪೀಲ್ ಸಲ್ಲಿಸಿದ ಶಾಲೆಗಳ ಪ್ರಸ್ತಾವನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರು (ಆಡಳಿತ) ಹಾಗೂ ಮಾನ್ಯ ಆಯುಕ್ತರ ಹಂತದಲ್ಲಿ ಪ್ರತ್ಯೇಕವಾಗಿ ಬ್ಯಾಚ್ ಪ್ರಕ್ರಿಯೆಗೆ ಒಳಪಡಿಸದೇ ಪರಿಶೀಲಿಸಲಾಗುವುದು. ಆದ್ದರಿಂದ ಅಪೀಲ್ ಹೋಗುವ ಶಾಲೆಗಳು ವಿದ್ಯಾರ್ಥಿಗಳನ್ನು ಸೇರಿಸುವ ಸಂದರ್ಭದಲ್ಲಿ ಮತ್ತು ಶಾಲಾ ಖರ್ಚು ವೆಚ್ಚಗಳನ್ನು ನಮೂದಿಸುವ ಸಂದರ್ಭದಲ್ಲಿ ಅತ್ಯಂತ ಜಾಗರೂಕತೆಯಿಂದ ತಂತ್ರಾಂಶದಲ್ಲಿ ನಮೂದಿಸುವುದು.
4. ಅಪೀಲ್ ತಂತ್ರಾಂಶವು ಏಕಮುಖ ಹರಿವಿಗೆ ಒಳಪಟ್ಟಿದ್ದು ಇದು ಮಾನ್ಯ ಆಯುಕ್ತರ ಹಂತದಲ್ಲಿ ತಿರಸ್ಕೃತವಾದಲ್ಲಿ ಸದರಿ ಶಾಲೆಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ.

5. 2018-19ರ ಅಪೀಲ್ ಪ್ರಸ್ತಾವನೆಯನ್ನು ಆನ್‌ಲೈನ್ ಮುಖೇನ ಸಲ್ಲಿಸಲು ಅಂತಿಮ ದಿನಾಂಕ 31-10-2019 ಆಗಿರುತ್ತದೆ. ಈ ದಿನಾಂಕದ ನಂತದ ಅಪೀಲ್ ಪ್ರಸ್ತಾವನೆಯನ್ನು ಸಲ್ಲಿಸಲು ಯಾವುದೇ ಅವಕಾಶವಿರುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಿದೆ.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

23/10/19

**ರವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ ಇ-ಮೇಲ್ ಮುಖಾಂತರ
2. ರಾಜ್ಯದ ಎಲ್ಲಾ ವಲಯ/ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಇ-ಮೇಲ್ ಮುಖಾಂತರ
3. ಸಂಬಂಧಿಸಿದ ಶಾಲಾ ಆಡಳಿತ ಮಂಡಳಿಗಳಿಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಅಗತ್ಯ ಕ್ರಮವಹಿಸುವುದಕ್ಕಾಗಿ.

**ಪ್ರತಿಯನ್ನು,**

1. ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಹಿರಿಯ ಕಾರ್ಯಕ್ರಮಾಧಿಕಾರಿಗಳು/ಪ್ರೋಗ್ರಾಮರ್ಸ್, ಎಸ್.ಎ.ಟಿ.ಎಸ್ ವಿಭಾಗ, ಸರ್ವಶಿಕ್ಷಣ ಅಭಿಯಾನ, ಇವರಿಗೆ ಕಳುಹಿಸುತ್ತಾ ಆರ್.ಟಿ.ಇ. ಅಡಿ ದಾಖಲಾತಿಯಾಗಿರುವ ವಿದ್ಯಾರ್ಥಿಗಳು ಶುಲ್ಕ ಮರುಪಾವತಿ ತಂತ್ರಾಂಶದಲ್ಲಿ ಇಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಇ-ಆಡಳಿತ ವಿಭಾಗಕ್ಕೆ ತುರ್ತಾಗಿ ಒದಗಿಸುವ ಬಗ್ಗೆ ಅಗತ್ಯ ಕ್ರಮವಹಿಸುವುದು.
3. ಕಛೇರಿ ಪ್ರತಿ.